ಕೆ.ವಿ. ರಾಜಲಕ್ಷ್ಮಿ

ಕಲೆ: ಕಿರಣ ನಾಯಕ ಹೊನ್ನಾವರ

# ಕಾಣೆಯಾದವರು

‘ಅಕ್ಕಾ, ನಮ್ಮ ಅವ್ವ ಕೆಲಸ ಮಾಡುತ್ತಲ್ಲ? ಆ ಓನರ್ ಮಗ ಕಾಣ್ತಾ ಇಲ್ವಂತೆ.’ ಮನೆಕೆಲಸದ ಚಂದ್ರಿ ಸುದ್ದಿ ತಲುಪಿಸಿದಾಗ ಹುಬ್ಬೇರಿಸಿದೆ.

‘ಎಷ್ಟು ವರ್ಷ? ಸ್ವಲ್ಪ ಜೋಪಾನವಾಗಿ ನೋಡ್ಕೊಬಾರದಾ?’ ಸಹಜವಾಗಿ ಕೇಳಿದೆ.

‘ಅಯ್ಯೋ ನೀವೂ ಸರಿ, ದೊಡ್ಡವರು, ಮದುವೆಯಾಗಿದೆ. ಐದಾರು ದಿನಗಳ ಹಿಂದೆ ಕೆಲಸಕ್ಕೆ ಹೋದವರು ಮನೆಗೆ ವಾಪಸ್ ಬಂದಿಲ್ಲ.’

ಸಾಲ ಸೋಲ? ಆರ್ಥಿಕ ಸಂಕಷ್ಟ ತಾಳಲಾರದೆ ಹೀಗೊಂದು ನಿರ್ಧಾರ ತೆಗೆದುಕೊಂಡಿರಬಹುದೆ? ವರ್ಕಿಂಗ್ ಪ್ಲೇಸ್‌ನಲ್ಲಿ ಕಿರುಕುಳ? ಹೇಳಿಕೊಳ್ಳಲಾಗದ ಬಾಧೆ... ಹೀಗೇನಾದರೂ ಇರಬಹುದೆ?

ನನ್ನ ಯೋಚನಾಸರಣಿಯನ್ನು ತಡೆಯುವಂತೆ, ‘ಮೂರು ತಲೆಮಾರು ಕೂತು ತಿನ್ನುವಷ್ಟು ಆಸ್ತಿ ಇದೆ; ಯಾವುದಕ್ಕೂ ಕೊರತೆ ಇಲ್ಲ. ಆದರೂ ಹೀಗ್ಯಾಕೋ?’

ಚಂದ್ರಿ ಮಾತು ಮುಂದುವರಿಸಿದಾಗ ಆತನಿಗೇನು ಹೇಳಿಕೊಳ್ಳಲಾಗದ ಕಷ್ಟವೋ... ಬದಲಾವಣೆಗೆ ಕಾಲೆಳೆದ ಕಡೆ ಸಾಗಿರಬಹುದು. ಮನಸ್ಸು ತಿಳಿಯಾದ ಮೇಲೆ ಬರಬಹುದೇನೋ? ಅನ್ನಿಸಿ ಸುಮ್ಮನಾದೆ.

ಇದಾದ ಕೆಲವು ದಿನಗಳಲ್ಲಿ ‘ಕಾಣೆಯಾಗಿದ್ದಾರೆ’ ಜಾಹೀರಾತಿನ ಅಡಿಯಲ್ಲಿ ಪ್ರಕಟವಾಗಿದ್ದ ವಿವರ ಅಚಾನಕ್ಕಾಗಿ ಸೆಳೆಯಿತು. ಸುಮಾರು 40ರ ಆಸುಪಾಸಿನ ವ್ಯಕ್ತಿಯ ಫೋಟೊ. ಇಂಥ ದಿನದಿಂದ ಕಾಣೆಯಾಗಿದ್ದಾರೆ, ಸಿಕ್ಕರೆ ಸಂಪರ್ಕಿಸಿ ಎಂದು ಒಂದು ಮೊಬೈಲ್ ಸಂಖ್ಯೆ. ಫೋಟೊ ನೋಡಿದರೆ ಸ್ಮಾರ್ಟ್ ಆಗಿದ್ದಾನೆ. ಇವನ್ಯಾಕೆ ಹೀಗೆ ಮಾಡಿದ? ಮತ್ತೊಂದು ಗಮನಕ್ಕೆ ಬಂದ ಅಂಶವೆಂದರೆ ಸಾಮಾನ್ಯವಾಗಿ ಇರುವ ಅಡಿಬರಹ ಅಥವಾ ಟಿಪ್ಪಣಿ, ‘ನೀನು ಮನೆ ಬಿಟ್ಟು ಹೋದಾಗಿಲಿನಿಂದ ಅಮ್ಮ ಊಟ ಬಿಟ್ಟಿದ್ದಾರೆ’, ‘ಅಪ್ಪ ಹಾಸಿಗೆ ಹಿಡಿದಿದ್ದಾರೆ’, ‘ನಿನ್ನನ್ನು ಯಾರೂ ಬೈಯ್ಯುವುದಿಲ್ಲ ಕೂಡಲೇ ಹಿಂತಿರುಗು’, ‘ನಿನ್ನ ತಪ್ಪನ್ನು ಕ್ಷಮಿಸಿದ್ದೇವೆ, ಮನೆಗೆ ಬರುವುದು’ ಇತ್ಯಾದಿ ಯಾವುದೇ ಭಾವುಕ ಮನವಿ ಇಲ್ಲ. ಸದ್ಯ ತೊಲಗಿದರೆ ಸಾಕೆಂದು ಮನೆಯವರೂ ಕಾದಿದ್ದರೆ?